**ಕರ್ನಾಟಕ ವಿಧಾನ ಪರಿಷತ್ತು**

**151ನೇ ಅಧಿವೇಶನ**

| ನಿಯಮ-72ರಡಿಯ ಸೂಚನೆ | |
|---|---|
| ಸೂಚನೆ ನೀಡಿದ ಮಾನ್ಯ ಸದಸ್ಯರುಗಳ ಹೆಸರು | ಶ್ರೀ ಎಸ್.ಎಲ್ ಬೋಜೇಗೌಡ ಹಾಗೂ<br>ಶ್ರೀ ಮರಿತಿಬ್ಬೇಗೌಡ<br>ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು |

**ಸೂಚನೆಯ ವಿಷಯ**

ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್ ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಹಾಗೂ ಪ್ರಾಂಶುಪಾಲರಿಗೆ 6ನೇ ಮತ್ತು 7ನೇ ವೇತನ ಸಮಿತಿಯ ಶಿಪಾರಸ್ಸಿನಂತೆ ಇದುವರೆವಿಗೂ ಬಡ್ತಿ ನೀಡದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯ ಬಯಸುತ್ತೇವೆ.

**ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಹೇಳಿಕೆ**

ಸರ್ಕಾರಿ/ಅನುದಾನಿತ ಇಂಜಿಯರಿಂಗ್ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರುಗಳಿಗೆ ಎಐಸಿಟಿಇಯು ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿಗಳನ್ವಯ ಹಾಗೂ ಸದರಿ ನಿಯಮಗಳನ್ನು ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಿ ಆದೇಶಿಸಿರುವ ಆದೇಶದ ಮೇರೆಗೆ ಕಾಲಕಾಲಕ್ಕೆ ವೃತ್ತಿ ಪದೋನ್ನತಿ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಸರ್ಕಾರದ ಆದೇಶ ಸಂಖ್ಯೆ:ಇಡಿ 89 ಡಿಟಿಇ 2022, ದಿನಾಂಕ:14.09.2023ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ 25 ಸಹಾಯಕ ಪ್ರಾಧ್ಯಾಪಕರುಗಳಿಗೆ ಸಹ-ಪ್ರಾಧ್ಯಾಪಕರು ಹುದ್ದೆಗೆ ಪದೋನ್ನತ್ತಿ ನೀಡಲಾಗಿದೆ.

2) ಸರ್ಕಾರದ ಆದೇಶ ಸಂಖ್ಯೆ:ಇಡಿ 30 ಡಿಟಿಇ 2022, ದಿನಾಂಕ:13.10.2023ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ 07 ಸಹಾಯಕ ಪ್ರಾಧ್ಯಾಪಕರುಗಳಿಗೆ ಸಹ-ಪ್ರಾಧ್ಯಾಪಕರು ಹುದ್ದೆಗೆ ಪದೋನ್ನತ್ತಿ ನೀಡಲಾಗಿದೆ.

3) ಸರ್ಕಾರದ ಆದೇಶ ಸಂಖ್ಯೆ:ಇಡಿ 111 ಡಿಟಿಇ 2022, ದಿನಾಂಕ:25.09.2023ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ 129 ಸಹಾಯಕ ಪ್ರಾಧ್ಯಾಪಕರುಗಳಿಗೆ ರೂ.6000 ಎ.ಜಿ.ಪಿ ಯಿಂದ ರೂ.7000 ಎ.ಜಿ.ಪಿ ಮಂಜೂರು ಮಾಡಲಾಗಿರುತ್ತದೆ.

4) ಸರ್ಕಾರದ ಆದೇಶ ಸಂಖ್ಯೆ:ಇಡಿ 167 ಡಿಟಿಇ 2022, ದಿನಾಂಕ:07.10.2023ರಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ 71 ಸಹಾಯಕ ಪ್ರಾಧ್ಯಾಪಕರುಗಳಿಗೆ ರೂ.6000 ಎ.ಜಿ.ಪಿ ಯಿಂದ ರೂ.7000 ಎ.ಜಿ.ಪಿ ಮಂಜೂರು ಮಾಡಲಾಗಿರುತ್ತದೆ

5) ಸರ್ಕಾರದ ಆದೇಶ ಸಂಖ್ಯೆ:ಇಡಿ 04 ಡಿಟಿಇ 2022, ದಿನಾಂಕ:20.09.2023ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಾಂಕ: 07.11.2015ರ ಮುಂಚಿತವಾಗಿ ಅರ್ಹರಿರುವ 54 ಉಪನ್ಯಾಸಕರುಗಳಿಗೆ

ರೂ.5700/6000 ಎ.ಜಿಪಿ ಯಿಂದ ರೂ.7000 ಎ.ಜಿ.ಪಿ ಮಂಜೂರು ಮಾಡಲಾಗಿರುತ್ತದೆ

6) ಸರ್ಕಾರದ ಆದೇಶ ಸಂಖ್ಯೆ:ಇಡಿ 03 ಡಿಟಿಇ 2022, ದಿನಾಂಕ:04.10.2023ರಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ದಿನಾಂಕ:07.11.2015ರ ಮುಂಚಿತವಾಗಿ ಅರ್ಹರಿರುವ 02 ಉಪನ್ಯಾಸಕರುಗಳಿಗೆ ರೂ.7000 ಎ.ಜಿಪಿ ಯಿಂದ ರೂ.8000 ಎ.ಜಿ.ಪಿ ಮಂಜೂರು ಮಾಡಲಾಗಿರುತ್ತದೆ

ಮುಂದುವರೆದು, ಎಐಸಿಟಿಇ ರೆಗ್ಯೂಲೇಷನ್ ದಿನಾಂಕ:05.03.2010 ಮತ್ತು ಎಐಸಿಟಿಇ ರೆಗ್ಯೂಲೇಷನ್ 2012ರ ಪ್ರಕಾರ ವೃತ್ತಿ ಪದೋನ್ನತಿ ಸೌಲಭ್ಯಗಳನ್ನು ನೀಡಬೇಕಾದಲ್ಲಿ ಎಪಿಐ ಆಧಾರಿತ ಮಾನದಂಡಗಳನ್ನು ಅನುಸರಿಸಬೇಕಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಇಡಿ 167 ಡಿಟಿಇ 2017, ದಿನಾಂಕ:10.11.2020 ಮತ್ತು ಇಡಿ 20 ಡಿಟಿಇ 2018, ದಿನಾಂಕ:08.12.2020ಗಳಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ ಕೆರಿಯರ್ ಅಡ್ವಾನ್ಸ್ ಮೆಂಟ್ ಯೋಜನೆಯಡಿ ಈಗಾಗಲೇ ಮಂಜೂರು ಮಾಡಲಾಗಿರುವ ಸೌಲಭ್ಯಗಳನ್ನು ಮತ್ತು ಮುಂದೆ ಮಂಜೂರು ಮಾಡಲಾಗುವ ಎಲ್ಲಾ ಪ್ರಕರಣಗಳನ್ನು ಇಲಾಖೆಯ ಆಂತರಿಕ ಲೆಕ್ಕಪರಿಶೋಧನೆಗೆ ಒಳಪಡಿಸಿ ಎಐಸಿಟಿಇಯು ನಿಗದಿಪಡಿಸಿರುವ ಅರ್ಹತೆಗಳನ್ನು ಪೂರೈಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು ಎಂದು ಆದೇಶಿಸಿರುತ್ತದೆ.

ಅದರನ್ವಯ ಪ್ರಸ್ತಾವನೆಗಳನ್ನು ಪರಿಶೀಲಿಸಲು ಸ್ಥಾನೀಕರಣ ಸಮಿತಿ ರಚಿಸಲಾಗಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿದ್ದು ತ್ವರಿತಗತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.

- ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಮತ್ತುಇಂಜಿನಿಯರಿಂಗ್ ಕಾಲೇಜುಗಳ ಬೋಧಕ ವೃಂದದವರಿಗೆ 6ನೇ ಎಐಸಿಟಿಇ ವೇತನ ಶ್ರೇಣಿ ಅನ್ವಯ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಮುಂಬಡ್ತಿ ನೀಡಲು ಹೊಸದಾಗಿ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳ ಸಂಬಂಧ Screening Cum Evaluation ಸಮಿತಿಯನ್ನು ರಚಿಸಲಾಗಿದ್ದು, ಸ್ವೀಕೃತವಾದ ಪ್ರಸ್ತಾವನೆಗಳನ್ನು ಪರಿಶೀಲಿಸುವ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುತ್ತದೆ.

- ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜಿಗೆ ಸಂಬಂದಿಸಿದಂತೆ 07ನೇ ಎಐಸಿಟಿಇ ವೇತನ ಶ್ರೇಣಿಯನ್ವಯ ಬೋಧಕ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಲು ಸ್ಥಾನೀಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಪ್ರತ್ಯಯೋಜಿಸಲಾಗಿದೆ. ಅದರಂತೆ, ವಿಷಯ ತಜ್ಞರ ಪಟ್ಟಿಗೆ ಅನುಮೋದನೆ/ಸಹಮತಿ ಕೋರಿ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿ ರವರಿಗೆ ದಿನಾಂಕ:15.11.2023ರಂದು ಪತ್ರ ಬರೆಯಲಾಗಿದೆ.

- ಸರ್ಕಾರದ ಪತ್ರ ಸಂಖ್ಯೆ:ಇಡಿ 89 ಡಿಟಿಇ 2023, ದಿನಾಂಕ:01.12.2023ರಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ 7ನೇ ಎಐಸಿಟಿಇ ವೇತನ ಶ್ರೇಣಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ವರ್ಗದವರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ಸ್ಥಾನೀಕರಣ ಮುಂಬಡ್ತಿ ಮತ್ತು ಎ.ಜಿ.ಪಿ

ಮಂಜೂರು ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಲು ವಿಷಯ ತಜ್ಞರುಗಳನ್ನೊಳಗೊಂಡ ಸ್ಥಾನೀಕರಣ ಸಮಿತಿಯನ್ನು ರಚಿಸಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿರುತ್ತದೆ ಹಾಗೂ ಸದರಿ ಸಮಿತಿ ಸಭೆಯನ್ನು ಪ್ರತಿ 06 ತಿಂಗಳಿಗೊಮ್ಮೆ ನಡೆಸಿ, ಅದರ ತೀರ್ಮಾನದಂತೆ ಅರ್ಹ ಬೋಧಕ ವರ್ಗದವರಿಗೆ ಪದೋನ್ನತಿ ನೀಡುವ ಕುರಿತು ಸೂಕ್ತ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ತಿಳಿಸಲಾಗಿರುತ್ತದೆ.

**ಸಂಖ್ಯೆ:ಇಡಿ 481 ಟಿಇಸಿ 2023**

**(ಡಾ. ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು